UASB LIBRARY
Jai Kisan
Newspaper Clippings
Saturday 04-03-2023
Pg. 1

ವನ್ಯಜೀವಿ ರಕ್ಷಣೆಯಲ್ಲಿ 50 ವರ್ಷ

ಸುದ್ದಿ ಸಮಗ್ರ

ಜಗತ್ತಿನ ಸಸ್ಯ ಹಾಗೂ ಪ್ರಾಣಿ ಪ್ರಭೇದಗಳ ಬಗ್ಗೆ ಜಾಗೃತಿ ಮೂಡಿಸುವುದು ವಿಶ್ವ ವನ್ಯಜೀವಿ ದಿನಾಚರಣೆಯ ಧ್ಯೇಯವಾಗಿದ್ದು, ಕನ್‌ವೆನ್ಷನ್ ಆನ್ ಇಂಟರ್‌ನ್ಯಾಷನಲ್ ಟ್ರೇಡ್ ಇನ್ ಎನ್‌ಡೆಂಜರ್ಡ್ ಸ್ಪೀಷೀಸ್ ಆಫ್ ವೈಲ್ಡ್ ಫಾನಾ ಆ್ಯಂಡ್ ಫ್ಲೋರಾ (ಸಿಐಟಿಇಎಸ್) ಒಪ್ಪಂದಕ್ಕೆ 1973 ಮಾರ್ಚ್ 3 ರಂದು ಸಹಿ ಹಾಕಲಾಯಿತು. ಸಿಐಟಿಇಎಸ್ ಅಂತಾರಾಷ್ಟ್ರೀಯ ಒಪ್ಪಂದವಾಗಿದ್ದು, ವಿಶ್ವದಾದ್ಯಂತ ಸಸ್ಯ ಹಾಗೂ ವನ್ಯಜೀವಿ ಸಂಕುಲಗಳ ಮೇಲೆ ಹಾನಿ ಆಗದಂತೆ ನಿಗಾವಹಿಸುತ್ತದೆ. ಈ ಒಪ್ಪಂದದ ಭಾಗವಾಗಿ ಪ್ರತಿ ವರ್ಷ ಮಾರ್ಚ್ 3 ರಂದು ವಿಶ್ವ ವನ್ಯಜೀವಿ ದಿನಾಚರಣೆಯ ಮೂಲಕ ಸಸ್ಯ ಹಾಗೂ ವನ್ಯಜೀವಿಗಳ ಬಗ್ಗೆ ಅರಿವು ಮೂಡಿಸಲಾಗುತ್ತಿದೆ. ಈ ಸಿಐಟಿಇಎಸ್ ಒಪ್ಪಂದ 50ನೇ ವರ್ಷ ಆಚರಿಸಿಕೊಳ್ಳುತ್ತಿದ್ದು, ಸಸ್ಯ ಮತ್ತು ವನ್ಯಜೀವಿ ಉಳಿವಿಗೆ ಹೇಗೆ ಕಾರ್ಯನಿರ್ವಹಿಸುತ್ತದೆ ಎಂಬ ಮಾಹಿತಿ ಇಲ್ಲಿದೆ.

ಏನಿದು ಸಿಐಟಿಇಎಸ್?

ಕನ್‌ವೆನ್ಷನ್ ಆನ್ ಇಂಟರ್‌ನ್ಯಾಷನಲ್ ಟ್ರೇಡ್ ಇನ್ ಎನ್‌ಡೆಂಜರ್ಡ್ ಸ್ಪೀಷೀಸ್ ಆಫ್ ವೈಲ್ಡ್ ಫಾನಾ ಆ್ಯಂಡ್ ಫ್ಲೋರಾ (ಸಿಐಟಿಇಎಸ್) 1973ರಲ್ಲಿ ಒಪ್ಪಂದ ಮಾಡಿಕೊಳ್ಳಲಾಯಿತು. ವಿಶ್ವದ ಸಸ್ಯ ಹಾಗೂ ವನ್ಯಜೀವಿ ಸಂಕುಲವನ್ನು ಉಳಿಸಿ ಬೆಳೆಸುವುದು ಈ ಒಪ್ಪಂದದ ಉದ್ದೇಶವಾಗಿದೆ. ಅಂತಾರಾಷ್ಟ್ರೀಯ ಸರ್ಕಾರಗಳಿಂದ ಸ್ಥಳೀಯ ಮಟ್ಟದವರೆಗೆ ಎಲ್ಲ ಸಂರಕ್ಷಣಾ ಪ್ರಯತ್ನಗಳನ್ನು ಈ ಒಪ್ಪಂದ ನಿರ್ವಹಿಸುತ್ತದೆ. ಇದು ಸಾಗರ ಜೀವಿಗಳು, ಸಾಗರಗಳ ಸಂರಕ್ಷಣೆಗೆ ಮತ್ತು ಸಂರಕ್ಷಣಾ ಚಟುವಟಿಕೆಗಳಿಗೆ ಧನಸಹಾಯವನ್ನು ನೀಡುತ್ತದೆ. ಜೀವವೈವಿಧ್ಯದಲ್ಲಿನ ನಷ್ಟವನ್ನು ತುಂಬಿಸುವುದಕ್ಕಾಗಿ ಯಶಸ್ಸಿ ಪಾಲುದಾರಿಕೆಗಳು ವ್ಯಾಪಾರವನ್ನು ಇದು ಕಂಡುಕೊಳ್ಳುತ್ತದೆ.



ವಿಶ್ವದಾದ್ಯಂತ ಸಸ್ಯ-ವನ್ಯಜೀವಿ ಸಂಕುಲಗಳ ಮೇಲೆ ಹಾನಿಯಾಗದಂತೆ ಸಿಐಟಿಇಎಸ್ ನಿಗಾ

ಕಾರ್ಯವೇನು?

ಸಿಐಟಿಇಎಸ್ ಅಂತಾರಾಷ್ಟ್ರೀಯ ಸರ್ಕಾರಗಳ ನಡುವಿನ ಒಪ್ಪಂದವಾಗಿದೆ. ಜಾಗತಿಕವಾಗಿ ವನ್ಯಪ್ರಾಣಿಗಳು ಮತ್ತು ಸಸ್ಯಗಳನ್ನುಸಂರಕ್ಷಣೆಗೆ ಶ್ರಮಿಸುತ್ತದೆ. ಇದು ದೇಶಗಳ ನಡುವಿನ ಗಡಿಯನ್ನು ದಾಟಿ ಕಾರ್ಯನಿರ್ವಹಿಸುತ್ತದೆ. ಇದು 37,000ಕ್ಕೂ ಹೆಚ್ಚು ಜಾತಿಯ ಪ್ರಾಣಿಗಳು ಮತ್ತು ಸಸ್ಯಗಳಿಗೆ ವಿವಿಧ ಹಂತದ ರಕ್ಷಣೆಯನ್ನು ನೀಡುತ್ತದೆ. ಪ್ರಸ್ತುತ, ಭಾರತ ಸೇರಿದಂತೆ 184 ದೇಶಗಳು ಈ ಒಪ್ಪಂದದಲ್ಲಿವೆ.







ರಫ್ತು ಮತ್ತು ಆಮದು ನೀತಿ

ವನ್ಯಜೀವಿ ಅಪರಾಧ ನಿಯಂತ್ರಣ ಬ್ಯೂರೋ ಶಾಸನಬದ್ಧ ಸಂಸ್ಥೆಯಾಗಿದ್ದು, ವಿಶೇಷವಾಗಿ ದೇಶದಲ್ಲಿ ಸಂಘಟಿತ ವನ್ಯಜೀವಿ ಅಪರಾಧವನ್ನು ತಡೆಗಟ್ಟುವುದು ಇದರ ಉದ್ದೇಶವಾಗಿದೆ. ಇದು 1972ರ ವನ್ಯಜೀವಿ ಸಂರಕ್ಷಣಾ ಕಾಯಿದೆ, ಸಿಐಟಿಇಎಸ್, ರಫ್ತು ಮತ್ತು ಆಮದು ನೀತಿಯನ್ನು ನಿಯಂತ್ರಿಸುತ್ತದೆ. ಸಸ್ಯ ಮತ್ತು ಪ್ರಾಣಿಗಳ ಸರಕುಗಳ ತಪಾಸಣೆಯಲ್ಲಿ ಕಸ್ಟಮ್ಸ್ ಅಧಿಕಾರಿಗಳಿಗೆ ಸಹಾಯ ಮಾಡುತ್ತದೆ ಮತ್ತು ಸಲಹೆ ನೀಡುತ್ತದೆ.

ಮೂರು ಭಾಗಗಳಲ್ಲಿ ಸಂರಕ್ಷಣೆ

ಸಿಐಟಿಇಎಸ್ ಒಪ್ಪಂದದ ಅನ್ವಯ ಮೂರು ಭಾಗಗಳಲ್ಲಿ ವನ್ಯಜೀವಿ ಹಾಗೂ ಸಸ್ಯಗಳನ್ನು ಸಂರಕ್ಷಿಸಲಾಗುತ್ತದೆ. ಅವುಗಳು ಈ ಇಂತಿವೆ.

ಭಾಗ-1ರ ಅನ್ವಯ ಅಸಾಧಾರಣ ಸಂದರ್ಭಗಳಲ್ಲಿ, ಮಾದರಿಗಳ ವ್ಯಾಪಾರವನ್ನು ವಿರಳವಾಗಿ ಅನುಮತಿಸಲಾಗುತ್ತದೆ. ಗೊರಿಲ್ಲಾಗಳು ಮತ್ತು ಸಿಂಹಗಳನ್ನು ರಫ್ತು ಅಥವಾ ಆಮದು ಮಾಡಿಕೊಳ್ಳಲಾಗುತ್ತದೆ.

ಭಾಗ-2ರ ಅನ್ವಯ ಪ್ರಾಣಿ ಮತ್ತು ಸಸ್ಯ ಉಳಿವಿಕೆಯನ್ನು ಖಚಿತ ಪಡಿಸಿಕೊಳ್ಳುತ್ತದೆ. ಆಲ್ಲದೇ ಅದರ ಸಂರಕ್ಷಣೆಗಾಗಿ ಕಾರ್ಯನಿರ್ವಹಿಸುತ್ತದೆ.

ಭಾಗ-3ರ ಪ್ರಕಾರ ಒಂದು ದೇಶದಲ್ಲಿ ಸಂರಕ್ಷಿಸಲ್ಪಟ್ಟ ಜಾತಿಗಳನ್ನು ಒಳಗೊಂಡಿದೆ. ಇದು ವ್ಯಾಪಾರವನ್ನು ನಿಯಂತ್ರಿಸಲು ಇತರ ದೇಶಗಳಿಗೆ ಸಹಾಯ ಕೇಳುತ್ತದೆ. ಉದಾಹರಣೆಗೆ: ಬಂಗಾಳ ನರಿ ಅಥವಾ ಭಾರತದಿಂದ ಗೋಲ್ಡನ್ ಜಾಕಲ್‌ಗಳಿಗಾಗಿ ಬೇಡಿಕೆ ಇಡುತ್ತದೆ.

ಸಿಐಟಿಇಎಸ್ ಒಪ್ಪಂದಕ್ಕೆ ಟೀಕೆ

ಒಂದು ವಾದದ ಪ್ರಕಾರ ವನ್ಯಜೀವಿಗಳನ್ನು ವ್ಯಾಪಾರ ಮಾಡಲು ಅನುಮತಿಸಿದರೆ ಅವುಗಳ ಸ್ವಾತಂತ್ರ್ಯವನ್ನು ಕಿತ್ತುಕೊಂಡಂತಾಗುತ್ತದೆ. ಅಲ್ಲದೇ, ಅಕ್ರಮ ವ್ಯಾಪಾರದ ಸಾಧ್ಯತೆಯನ್ನು ಹೆಚ್ಚಿಸುತ್ತದೆ ಎಂದು ಹೇಳಲಾಗಿದೆ. ನೇಷನ್ ಜಿಯಾಗ್ರಫಿಕ್ ಜರ್ನಲ್ ಸೈನ್ಸ್‌ನ 2019ರ ವಿಶ್ಲೇಷಣೆ ಪ್ರಕಾರ, ಇದು ಸುಮಾರು ಮೂರನೇ ಎರಡರಷ್ಟು ಪ್ರಕರಣಗಳಲ್ಲಿ ಅವ್ಯವಹಾರವಾಗಿರುವುದು ಕಂಡುಬಂದಿದೆ. ವನ್ಯಜೀವಿ ವ್ಯಾಪಾರದಲ್ಲಿರುವ ಅನೇಕ ಪ್ರಾಣಿಗಳು ಸಿಐಟಿಇಎಸ್‌ನಿಂದ ರಕ್ಷಿಸಲ್ಪಟ್ಟಿಲ್ಲ. ದೇಶಗಳು ಅಪರೂಪವಾಗಿ ಈ ಒಪ್ಪಂದಕ್ಕೆ ಅನುಮೋದಿಸುತ್ತವೆ ಮತ್ತು ಪ್ರಕ್ರಿಯೆಯು ಹೆಚ್ಚು ರಾಜಕೀಯಗೊಳಿಸಬಹುದು ಎಂದು ಹೇಳಿದೆ.







04-03-2023
Hosadiganta Pg 05

For more information visit
University Library Website
Web - uasbagrilibindia.org
E-mail- librarian@uasbangalore.edu.in

14-02-2023
Vijayavani Add. Pg 03



ಆರ್ಥಿಕಶಕ್ತಿಯುಳ್ಳ ರಾಜಕಾರಣಿಗಳು, ಶ್ರೀಮಂತ ನಟ- ನಟಿಯರು ಮತ್ತು ಉದ್ದಿಮೆದಾರರು ಮಾತ್ರವೇ ಫಾರ್ಮ್ ಹೌಸ್‌ಗಳನ್ನು ಖರೀದಿಸಲು ಸಾಧ್ಯ ಎಂಬ ಮನಸ್ಥಿತಿ ಹಿಂದೆ ಇತ್ತು. ಈಗ ಫಾರ್ಮ್‌ಹೌಸ್ ಹೊಂದಬೇಕೆಂಬ ಅಭಿಲಾಷೆ ಎಲ್ಲರಿಗೂ ಬರುತ್ತಿದ್ದು, ಮಧ್ಯಮ ವರ್ಗದವರೂ ಫಾರ್ಮ್ ಹೌಸ್ ಖರೀದಿಸುತ್ತಿದ್ದಾರೆ. ಈ ಟ್ರೆಂಡ್ ಈಗ ಜೋರಾಗುತ್ತಿದೆ.

ತೋಟದ ಮನೆ ಕಟ್ಟಿಸಿ ಕೃಷಿ ಮಾಡಿ

■ ವಿಜಯವಾಣಿ ಸುದ್ದಿಜಾಲ ಬೆಂಗಳೂರು

ಇತ್ತೀಚಿನ ವರ್ಷಗಳಲ್ಲಿ ನಿವೇಶನ, ಮನೆ, ಅಪಾರ್ಟ್‌ಮೆಂಟ್ ಮತ್ತು ವಿಲ್ಲಾ ಖರೀದಿಸುವವರ ಸಂಖ್ಯೆ ಹೆಚ್ಚುತ್ತಿರುವ ನಡುವೆಯೂ ಫಾರ್ಮ್ ಲ್ಯಾಂಡ್ ಖರೀದಿ ಟ್ರೆಂಡ್ ಜೋರಾಗಿದೆ. ನಗರದ ಹೊರವಲಯದಲ್ಲಿ ಬಜೆಟ್‌ಗೆ ತಕ್ಕಂತೆ ಫಾರ್ಮ್ ಹೌಸ್ ಖರೀದಿಗೆ ಹೊಸ ಪ್ರಾಜೆಕ್ಟ್‌ಗಳನ್ನು ಆನಾವರಣ ಮಾಡಲಾಗುತ್ತಿದೆ. ರಿಯಲ್ಟಿ ಕಂಪನಿಗಳು ರಾಜಧಾನಿ ಹೊರವಲಯದ ಸುತ್ತಮುತ್ತ, ಕನಕಪುರ, ಬಿಡದಿ, ಮಾಗಡಿ, ನೆಲಮಂಗಲ, ರಾಮನಗರ ಹಾಗೂ ತುಮಕೂರಿನಲ್ಲಿ ಹತ್ತಾರು ಎಕರೆಯಲ್ಲಿ ಫಾರ್ಮ್‌ಹೌಸ್ ಅಭಿವೃದ್ಧಿಪಡಿಸಿವೆ.

ಹಣವುಳ್ಳ ರಾಜಕಾರಣಿಗಳು, ನಟ/ನಟಿಯರು ಮತ್ತು ಉದ್ದಿಮೆದಾರರು ಮಾತ್ರವೇ ಫಾರ್ಮ್‌ಹೌಸ್‌ಗಳನ್ನು ಖರೀದಿಸಲು ಆರ್ಥಿಕವಾಗಿ ಶಕ್ತಿ ಇದೆ ಎಂಬ ಮನಸ್ಥಿತಿ ಹಿಂದೆ ಇತ್ತು. ಈಗ ಫಾರ್ಮ್‌ಹೌಸ್ ಹೊಂದಬೇಕೆಂಬ ಅಭಿಲಾಷೆ ಎಲ್ಲರಿಗೂ ಬರುತ್ತಿದ್ದು, ಈಗ ಮಧ್ಯಮ ವರ್ಗದವರು ಫಾರ್ಮ್‌ಹೌಸ್ ಖರೀದಿಸುತ್ತಿದ್ದಾರೆ. ಫಾರ್ಮ್‌ಹೌಸ್‌ನಲ್ಲಿ ಜಾನುವಾರು, ಕುರಿ ಮೇಕೆ, ಕೋಳಿ ಇತರ ಪ್ರಾಣಿಗಳ ಸಾಗಾಣಿಕಾ ಘಟಕಗಳು, ತೆಗ, ಸಿಲ್ವರ್ ಓಕ್, ಮಹಗೋನಿ, ತೆಂಗು, ನೇರಳೆ, ಸೀಬೆ ಅಂಜೂರ ಸೇರಿ ಎಲ್ಲ ಬಗೆಯ ಹಣ್ಣಿನ ಗಿಡಗಳು ಇರಲಿವೆ. ಕ್ಲಬ್ ಹೌಸ್, ಈಜುಕೊಳ, ಒಳಾಂಗಣ ಮತ್ತು ಹೊರಂಗಣ ಕ್ರೀಡಾಂಗಣ, ಆಟದ ಮೈದಾನ, ಪಾರ್ಕ್, ಪ್ರತಿ ಫಾರ್ಮ್‌ಹೌಸ್‌ಗೆ ವಿಶಾಲವಾದ ರಸ್ತೆ, ಕುಡಿಯುವ ನೀರು, ಹನಿ ನೀರಾವರಿ ಮತ್ತು ವಿದ್ಯುತ್ ಸಂಪರ್ಕ, ತೆಂಗಿನ ತೋಟ, ಮಾವಿನ ತೋಟ, ಸಸ್ಯಹಾರಿ ಮತ್ತು ಮಾಂಸಹಾರಿ ಹೋಟೆಲ್‌ಗಳು ಸೇರಿ ಸೇರಿ ಆತ್ಯಾಧುನಿಕ ಸೌಲಭ್ಯಗಳಿವೆ. ಆಯುರ್ವೇದಿಕ್ ಮತ್ತು ನ್ಯಾಚುರೋಪಥಿ ಪ್ರಕೃತಿ ಚಿಕಿತ್ಸಾ ಕೇಂದ್ರ, ಎಕೋ ಟೂರಿಸಂ ಎಕ್ಸ್‌ಪೀರಿಯನ್ಸ್ ಸೆಂಟರ್‌ಗಳಿವೆ. ಎಕ್ಸ್‌ಪೀರಿಯನ್ಸ್ ಸೆಂಟರ್‌ನಲ್ಲಿ ಕೃಷಿ ಸೇರಿ ವಿವಿಧ ವಿಷಯಗಳ ಬಗ್ಗೆ ಕಲಿತುಕೊಳ್ಳಲು ಅವಕಾಶ ಸಿಗುತ್ತದೆ. ಗ್ರಾಹಕರು ತಮಗೆ ಇಷ್ಟದಂತೆ ಫಾರ್ಮ್ ಹೌಸ್ ಕಟ್ಟಿಕೊಳ್ಳಬಹುದು. ಇಲ್ಲವಾದರೆ ಸಂಸ್ಥೆಯವರೇ ಕಟ್ಟಿಕೊಡುತ್ತಾರೆ. ಗೆಟೆಡ್ ಕಮ್ಯೂನಿಟಿ ಸೌಲಭ್ಯ ಹೊಂದಿರುವ ಫಾರ್ಮ್‌ಹೌಸ್ ಗ್ರಾಹಕರನ್ನು ಕೈಬಿಸಿ ಕರೆಯುತ್ತಿವೆ.

» ಫಾರ್ಮ್ ಲ್ಯಾಂಡ್ ಖರೀದಿಸುವವರ ಸಂಖ್ಯೆ ಹೆಚ್ಚಳ

» ರಾಜಧಾನಿ ಸುತ್ತಮುತ್ತ ಹೊಸ ಪ್ರಾಜೆಕ್ಟ್‌ಗಳ ಪರಿಚಯ



ಫಾರ್ಮ್‌ಲ್ಯಾಂಡ್‌ನಲ್ಲಿ ಸಾಕಷ್ಟು ಸೌಕರ್ಯ

ಫಾರ್ಮ್‌ಲ್ಯಾಂಡ್ ಪ್ರಾಜೆಕ್ಟ್‌ನಲ್ಲಿ ಹತ್ತಾರು ಎಕರೆ ಕೃಷಿ ಭೂಮಿ ಇರುತ್ತದೆ. ಜನರು ತಮ್ಮ ಅನುಕೂಲಕ್ಕೆ ತಕ್ಕಂತೆ ಫಾರ್ಮ್‌ಹೌಸ್‌ಗಳನ್ನು ಖರೀದಿಸಬಹುದು. ಐದೂವರೆ ಗುಂಟೆಯಿಂದ ಆರಂಭವಾಗಿ ಅರ್ಧ, ಮುಕ್ಕಾಲು, ಒಂದು ಎಕರೆ ಸೇರಿ ಬಂಡವಾಳ ತಕ್ಕಂತೆ ಭೂಮಿ ಗಾತ್ರ ಖರೀದಿಸಬಹುದು. ಖರೀದಿಸಿದ ಜಾಗದಲ್ಲಿ ನೀವು ಕೃಷಿ ಮಾಡಬಹುದು. ಕಾರ್ಮಿಕರ ಲಭ್ಯತೆ ಇರಲಿದೆ. ಕೃಷಿ ಭೂಮಿ ನಿರ್ವಹಣೆಯನ್ನು ಬೇರೆಯವರಿಗೂ ಒಪ್ಪಿಸಬಹುದು. ನಿಮ್ಮ ಭೂಮಿಯಲ್ಲಿ ಮನೆ ಕಟ್ಟಿಕೊಳ್ಳಬಹುದು. ಆ ಮನೆಯನ್ನು ಬೇಕಾದರೆ ಬಾಡಿಗೆಗೂ ನೀಡಬಹುದು. ಕೃಷಿ ಭೂಮಿಯಲ್ಲಿ ಬೆಳೆದ ಇಳುವರಿಯಿಂದ ಆದಾಯವೂ ಸಿಗಲಿದೆ. ನೀವು ಇರುವ ಫಾರ್ಮ್‌ಲ್ಯಾಂಡ್‌ನ ಒಟ್ಟಾರೆ ಪ್ರಾಜೆಕ್ಟ್‌ನಲ್ಲಿ ಬರುವ ಇಳುವರಿಯಿಂದ ಪಾಲು ಪಡೆಯಬಹುದು. ಒಟ್ಟಾರೆ ಪ್ರಾಜೆಕ್ಟ್‌ನಲ್ಲಿ ಸಾಕಷ್ಟು ಸೌಕರ್ಯಗಳು ಇರುತ್ತದೆ.



ಭವಿಷ್ಯದಲ್ಲಿ ಉತ್ತಮ ಲಾಭ

ಫಾರ್ಮ್ ಲ್ಯಾಂಡ್‌ನಲ್ಲಿ ಖರೀದಿಸಿದ ಜಾಗದಲ್ಲಿ ತೋಟದ ಮನೆ ಕಟ್ಟಿಸಿಕೊಂಡು ಕೃಷಿ ಮತ್ತು ಗಿಡಗಳನ್ನು ಸೇರಿ ಇತರೆ ಕೃಷಿ ಚಟುವಟಿಕೆ ಮಾಡಿಕೊಳ್ಳಬಹುದು. ನಿವೇಶನ ಖರೀದಿಸುವ ಬದಲು ಅದೇ ಬಂಡವಾಳವನ್ನು ಭೂಮಿಗೆ ಹಾಕಿದರೆ ಭವಿಷ್ಯದಲ್ಲಿ ಉತ್ತಮ ಲಾಭವೂ ಸಿಗಲಿದೆ. ಯಾವುದೇ ಕ್ಷೇತ್ರದಲ್ಲಿ ಉದ್ಯೋಗ ಮಾಡುತ್ತಿರುವವರು, ನಿವೃತ್ತರಾದವರು ಕೃಷಿಕರಾಗುವ ತಮ್ಮ ಕನಸನ್ನು ಫಾರ್ಮ್‌ಲ್ಯಾಂಡ್ ಖರೀದಿ ಮೂಲಕ ಈಡೇರಿಸಿಕೊಳ್ಳಬಹುದು. ವಾರಾಂತ್ಯದಲ್ಲಿ ಕುಟುಂಬ ಸಮೇತ ಉತ್ತಮ ಮತ್ತು ಹಸಿರು ಪರಿಸರ ಜತೆ ಕೃಷಿ ಮಾಡಿಕೊಂಡು ಆರಾಮವಾಗಿ ಸಮಯ ಕಳೆಯಬಹುದು. ಇದರಿಂದ, ಮನಸ್ಸಿನ ಚೈತನ್ಯಕ್ಕೆ ಮುದ ಸಿಗಲಿದೆ. ನೀವು ಹಾಕಿರುವ ಬಂಡವಾಳ ಭವಿಷ್ಯದಲ್ಲಿ ವಾಪಸ್ ಸಿಗಲಿದೆ.

ವೀಳ್ಯದೆಲೆಯ ಬೆಲೆ ಗಗನಕ್ಕೆ ನಾಲಿಗೆ ಜೊತೆ ಕಣ್ಣು ಕೆಂಪು



ಸಂ.ಕ.ಸಮಾಚಾರ ನೆಲಮಂಗಲ

ವೀಳ್ಯದೆಲೆ ಒಂದು ಕಟ್ಟಿಗೆ ಒಂದುನೂರ ಐವತ್ತು ರೂಗಳಷ್ಟು ದರ.., ಶುಭ ಸಮಾರಂಭಗಳಿಗೆ ತಾಂಬೂಲ ತುಂಬಾ ಭಾರ..! ಎನ್ನುವಂತಾಗಿದೆ.

ಇನ್ನು ದಿನಂಪ್ರತಿ ಎಲೆಅಡಿಕೆ ಹಾಕಿಕೊಳ್ಳುವವರ ನಾಲಿಗೆಗಿಂತ ಕಣ್ಣನ್ನೇ ಕೆಂಪಾಗಿಸುತ್ತಿದೆ ವಿಳೆದೆಲೆ. ಮಳೆ ಆರಂಭಗೊಳ್ಳುವವರೆಗೂ ದರ ಇಳಿಯುವುದು ಅನುಮಾನವೇ ಸರಿ.

ಹೌದು ಸಮಾರಂಭ ಯಾವುದೇಯಿರಲಿ ಪೂಜಾ ಕಾರ್ಯಕ್ರಮಗಳೇಯಿರಲಿ 'ವೀಳ್ಯದೆಲೆ' ಬೇಕೇಬೇಕು. ಆದರೆ ಈ ವೀಳ್ಯದೆಲೆಯ ಬೆಲೆ ನೋಡಿದರೆ ಮುಗಿಲೆತ್ತರಕ್ಕೇರಿದೆ. ಹತ್ತುರೂಗೆ, ಇಪ್ಪತ್ತು ರೂಪಾಯಿಗಳಿಗೆ ವಿಳ್ಯೇದೆಲೆ ಕೊಡಿ ಎಂದರೆ ಇಲ್ಲಾ ರೀ..ಬರೋದಿಲ್ಲ, ಯಾಕಪ್ಪಾ ಎಂದರೆ ಸ್ವಾಮಿ ಒಂದು ಕಟ್ಟು ವಿಳೆದೆಲೆ ನೂರೈವತ್ತು ರೂಪಾಯಿ ಎಂದಾಗ ದಿನವೂ ಎಲೆಅಡಿಕೆ ಜಿಗಿಯುವವರ ನಾಲಿಗೆಗಿಂತ ಕಣ್ಣು ಕೆಂಪಗಾಗುತ್ತದೆ. ಮಳೆಗಾಲ ಕೊನೆಯಾಗಿ ಚಳಿಗಾಲದ ಆರಂಭದೊತ್ತಿಗೆ ವಿಳ್ಯೆದೆಲೆ ಬಳ್ಳಿಯಲ್ಲಿ(ಅಂಬು) ಚಿಗುರುವುದಿಲ್ಲ. ಈ ಕಾರಣ ವಿಳ್ಯೆದೆಲೆಯ ಬೆಲೆ ಹೆಚ್ಚಾಗುತ್ತಿದೆ. ಜೊತೆಗೆ ಕಳೆದ ಎರಡು ವರ್ಷಗಳಿಂದ ಹೆಚ್ಚು ಮಳೆಯಾಗಿದ್ದು ವಿಳ್ಯೆದೆಲೆ ತೋಟದಲ್ಲಿ ನೀರು ನಿಂತುಕೊಂಡಿದ್ದರ ಪರಿಣಾಮ, ಸಾಕಷ್ಟು ತಂಗಾಳಿ ಬೀಸಿರುವುದರಿಂದ ಸಾಕಷ್ಟು ಎಲೆಬಳ್ಳಿಗಳು ಕೊಳೆತುಹೋಗಿವೆ.

14-02-2023
S-karanataka Pg 04

ತಾರಸಿ ತೋಟ ಒಲವಿನ ನೋಟ



■ ವಿಜಯವಾಣಿ ಸುದ್ದಿಜಾಲ ಬೆಂಗಳೂರು

ಕೋವಿಡ್ ನಂತರದಲ್ಲಿ ಜನರಲ್ಲಿ ಆರೋಗ್ಯದ ಬಗ್ಗೆ ಬಹಳಷ್ಟು ಜಾಗೃತಿ ಮೂಡಿದ್ದು, ಇದರ ಪರಿಣಾಮ ನಗರದಲ್ಲಿ ತಾರಸಿ ತೋಟ ಹಾಗೂ ಕೈತೋಟಗಳತ್ತ ಸಂಖ್ಯೆ ಹೆಚ್ಚಾಗಿವೆ. ಸ್ವತಃ ಹಣ್ಣು, ತರಕಾರಿ, ಹೂಗಳನ್ನು ಬೆಳೆಸುವ ಹಂಬಲ ನಗರವಾಸಿಗಳಲ್ಲಿ ಹೆಚ್ಚುತ್ತಿದೆ.

ಈ ಮೊದಲು ಅಲಂಕಾರಿಕ ಗಿಡಗಳನ್ನು ಬೆಳೆಸುತ್ತಿದ್ದ ಮಂದಿ, ಈಗ ಹಣ್ಣ ತರಕಾರಿ ಕೃಷಿ ಮಾಡುತ್ತಿದ್ದಾರೆ. ಕುಟುಂಬಕ್ಕೆ ಪ್ರತಿನಿತ್ಯ ಆಗತ್ಯವಿರುವ ಸೊಪ್ಪು, ತರಕಾರಿಗಳನ್ನು ಬೆಳೆಯುವುದು ಹೆಚ್ಚಿದೆ. ಮನೆಯಲ್ಲಿ ನಿತ್ಯ ಉತ್ಪತ್ತಿಯಾಗುವ ಹಸಿ ತ್ಯಾಜವನ್ನೇ ಗೊಬ್ಬರವಾಗಿಸಿಕೊಂಡು ಅಂದವಾದ ಕೈತೋಟ ಹಾಗೂ ತಾರಸಿ ತೋಟಗಳನ್ನು ಅಭಿವೃದ್ಧಿಪಡಿಸುತ್ತಿದ್ದಾರೆ.

ಗ್ರಾಮೀಣ ಹಾಗೂ ಪಟ್ಟಣ ಮತ್ತು ನಗರ ಪ್ರದೇಶಗಳಲ್ಲಿ ಬಹಳಷ್ಟು ಕುಟುಂಬಗಳು ಅವಶ್ಯಕತೆಗೆ ಅನುಗುಣವಾಗಿ ಬಹುತೇಕ ಹಣ್ಣು ತರಕಾರಿಗಳನ್ನು ಮನೆಯ ಕೈತೋಟಗಳಿಂದಲೇ ಪೂರೈಸಿಕೊಳ್ಳುತ್ತಾರೆ. ಆದರೆ, ನಗರ ಪ್ರದೇಶದ ಜನರು ಹಣ್ಣು ಮತ್ತು ತರಕಾರಿಗಾಗಿ ಮಾರುಕಟ್ಟೆಗಳನ್ನೇ ಅವಲಂಬಿಸಿದ್ದಾರೆ. ಹೀಗೆ ಮಾರುಕಟ್ಟೆಯಲ್ಲಿ ಕೊಳ್ಳುವ ಹಣ್ಣು ತರಕಾರಿ ರಾಸಾಯನಿಕ ಬಳಸಿ ಬೆಳೆಸಿರುವುದರಿಂದ ಆರೋಗ್ಯದ ಮೇಲೆ ದುಷ್ಪರಿಣಾಮ ಬೀರುತ್ತದೆ. ಹೀಗಾಗಿ ಮನೆಯ ಮುಂದೆ ಅಥವಾ ತಾರಸಿಯಲ್ಲಿ ಪುಟ್ಟ ಕೈತೋಟ ನಿರ್ಮಿಸಿಕೊಂಡು ಅದರ ಮೂಲಕ ಸಾವಯವ ಪದ್ಧತಿಯಲ್ಲಿ ಆರೋಗ್ಯಕರ ಆಹಾರ ಪಡೆಯಬಹುದಾಗಿದೆ ಎನ್ನುತ್ತಾರೆ ಪರಿಸರ ಪ್ರೇಮಿಗಳು.

ಕುಂಡಗಳಲ್ಲಿ ಕೈತೋಟ: ನಗರ ಪ್ರದೇಶಗಳಲ್ಲಿ ಜಾಗದ ಸಮಸ್ಯೆ ಇರುವುದರಿಂದ ಮನೆಯ ಕಾಂಪೌಂಡ್, ಪ್ಯಾಸೇಜ್‌ಗಳು ಹಾಗೂ ತಾರಸಿ ಮೇಲೆ, ಎಲ್ಲೆಲ್ಲಿ ಸ್ಥಳಾವಕಾಶ ಇದೆಯೋ ಅಲ್ಲಿ ಕುಂಡಗಳಲ್ಲಿ ಸುಲಭವಾಗಿ ಸಾವಯವ ಪದ್ಧತಿಯಲ್ಲಿ ಹಣ್ಣು, ತರಕಾರಿ ಬೆಳೆಯಬಹುದು. ಇದಕ್ಕಾಗಿಯೇ ಮಾರುಕಟ್ಟೆಯಲ್ಲಿ ಮಣ್ಣಿನ ಕುಂಡಗಳು, ಪ್ಲಾಸ್ಟಿಕ್, ಫೈಬರ್, ಸಿಮೆಂಟ್, ಪ್ಯಾರಫಿನ್, ಗ್ರೋ ಬ್ಯಾಗ್ಸ್ ಗಳು ಲಭ್ಯವಿವೆ.

ಕೈತೋಟದ ಬೆಳೆಗಳು

ಹಣ್ಣುಗಳು: ಸಪೋಟ, ನಿಂಬೆ, ಪಪ್ಪಾಯ, ದಾಳಿಂಬೆ, ಅಂಜೂರ, ಸೀಬೆ, ನೆಲ್ಲಿ, ಬಟರ್ ಫ್ರೂಟ್.

ತರಕಾರಿಗಳು: ಎಲ್ಲ ಬಗೆಯ ಸೊಪ್ಪುಗಳು, ಗೆಡ್ಡೆಗೆಣಸು, ಬೀನ್ಸ್, ಕ್ಯಾರೆಟ್, ಬೀಟ್ರೂಟ್, ಮೂಲಂಗಿ, ಆಲೂಗೆಡ್ಡೆ, ಬದನೆಕಾಯಿ, ಟೋಮ್ಯಾಟೋ, ಹಸಿಮೆಣಸಿನ ಕಾಯಿ, ಕೊತ್ತಂಬರಿ ಸೊಪ್ಪು, ಪುದೀನ, ಶುಂಠಿ, ಈರುಳ್ಳಿ, ಕರಿಬೇವು ಸೇರಿದಂತೆ ಅಭಿರುಚಿಗೆ ತಕ್ಕಂತೆ ಬಹಳಷ್ಟು ತರಕಾರಿಗಳನ್ನು ಬೆಳೆಯಬಹುದು.

ಹೂಗಳು: ಚೆಂಡು, ಗುಲಾಬಿ, ಮಲ್ಲಿಗೆ, ಕನಕಾಂಬರ, ಸೇವಂತಿಗೆ, ದಾಸವಾಳ ಹೀಗೆ ಹಲವು ಹೂಗಳನ್ನು ಬೆಳೆದು ನಿತ್ಯದ ಪೂಜೆಗೆ ಬಳಸಬಹುದು.

ಔಷಧೀಯ ಬೆಳೆಗಳು: ಒಂದೆಲಗ, ಚಕ್ರಮುನಿ, ಹಿಪ್ಪಲಿ, ಅಮೃತಬಳ್ಳಿ, ದೊಡ್ಡ ಪತ್ರೆ, ನೆಲಬೇವು,ಮಧುನಾಶಿನಿ, ತುಳಸಿ ಇತ್ಯಾದಿ.



ಮಾತ್ರವಲ್ಲದೆ, ಮನೆಯಲ್ಲಿ ಉಳಿದಿರುವ ಒಡೆದ ಪ್ಲಾಸ್ಟಿಕ್ ಬಕೆಟ್, ಡಬ್ಬಗಳು, ಕೊಳವೆಗಳು ಹೀಗೆ ತ್ಯಾಜ್ಯ ವಸ್ತುಗಳಲ್ಲೂ ವಿಧವಿಧವಾದ ಸಸಿಗಳನ್ನು ಬೆಳೆಸುವ ಮೂಲಕ ಕೈತೋಟದ ಅಂದವನ್ನು ಹೆಚ್ಚಿಸಬಹುದಾಗಿದೆ.

14-02-2023
Dec Hrd Pg 13

World food prices fall for 11th month running in February: FAO

LONDON, REUTERS



The United Nations food agency's world price index fell in February for an 11th consecutive month, and is now down 19% from a record high hit last March following Russia's invasion of Ukraine.

The Food and Agriculture Organization's (FAO) price index, which tracks the most globally traded food commodities, averaged 129.8 points last month against 130.6 for January, the agency said on Friday. It was the lowest reading since September 2021.

The monthly update said the decline in the index reflected lower prices for vegetable oils and dairy products, which more than offset a steep rise in sugar prices.

The FAO cereal price index fell by a marginal 0.1% month-on-month in February, with a marginal rise in wheat prices more than offset by lower rice prices.

Vegetable oils fell by 3.2% and dairy by 2.7%, while sugar rose by 6.9% to a six-year high due largely to a downward revision to production in India.

Lower wheat production

In a separate report on cereals supply and demand, the FAO issued a first preliminary forecast for global wheat production in 2023, with a year-on-year decline to 784 million tonnes seen although the crop would still be the second highest on record.

"In Ukraine, severe financial constraints, infrastructure damage and obstructed access to fields in parts of the country have resulted in an estimated 40% year-on-year reduction in the 2023 winter wheat area, and a well below-average wheat output is anticipated in 2023," the FAO said.

The decline was partially offset by an expected rise in US production to 51 million tonnes, with high prices leading to an increase in wheat sowings to the highest level since 2015.

The FAO raised its forecast for world cereal production in 2022 by 9 million tonnes to 2.77 billion tonnes, although that would still be 1.3% lower year-on-year.

The report said the bulk of the upward revision related to rice, with an improved outlook for production in India.